

ಸ್ವರವನ್ನು ಆಲಿಸುತ್ತಾ ಕಾಡಿನಲ್ಲಿದ್ದ ಚೂರಿ ಹಣ್ಣು, ಬುಕ್ಕಿ ಹಣ್ಣು, ನೇರಳೆ, ಮುಳ್ಳು ಹಣ್ಣು, ಪೇರಲ, ಚಿಕ್ಕ ಬುಗುರಿ ಹಣ್ಣುಗಳನ್ನು ತಿನ್ನುತ್ತಾ ಚಾರಣ ಮುಗಿಸುತ್ತಿದ್ದೆವು. ಚಾರಣಕ್ಕೆ ಹೊರಟ ಕಾಡಿನ ದೃಶ್ಯಗಳು ಕಣ್ಣಿಗೆ ಈಗಲೂ ಕಟ್ಟಿದಂತಿವೆ.

ಮೊಬೈಲ್ ಕಾಟವಿಲ್ಲದ ಆ ಬಾಲ್ಯದಲ್ಲಿ ಕುಂಟೋಬಿಲ್ಲೆ, ಚೆನ್ನೆಮಣೆ, ಕಣ್ಣಾಮುಚ್ಚಾಲೆ ಬಲು ಪ್ರೀತಿಯ ಆಟಗಳಾಗಿದ್ದವು. ತೆಂಗಿನ ಗರಿಯನ್ನು ಬುಡ ಕತ್ತರಿಸಿ ಬ್ಯಾಟ್ ಮಾಡಿಕೊಂಡು ಸಂಜೆಯ ವೇಳೆ ಗದ್ದೆ ಬೈಲಿನಲ್ಲಿ ಆಡುತ್ತಿದ್ದ ಕ್ರಿಕೆಟ್ ಆಟ ಹೇಗೆ ತಾನೇ ಮರೆಯಲು ಸಾಧ್ಯ?

ಏಪ್ರಿಲ್– ಮೇ ಸಮಯವಾದ್ದರಿಂದ ಊರ ತೇರು, ಜಾತ್ರೆಗಳಿಗೇನೂ ಕಮ್ಮಿಯಿಲ್ಲ. ಜಾತ್ರೆಗೆ ಅಜ್ಜ ನಮ್ಮನ್ನು ಕರೆದುಕೊಂಡು ಹೋಗಿ ಹೊಸ ಅಂಗಿ, ಮಿಠಾಯಿ, ಐಸ್‌ಕ್ರೀಂ ಕೊಡಿಸುತ್ತಾ ಒಂದಿಷ್ಟು ಆಟಿಕೆಗಳನ್ನು ಕೊಡಿಸಿ ಕರೆತರುತ್ತಿದ್ದರು. ಜನಜಂಗುಳಿಯಲ್ಲಿ ತೇರು ಕಾಣಿಸದಿದ್ದಾಗ, ನಮ್ಮನ್ನು ತನ್ನ ಹೆಗಲ ಮೇಲೆ ಕೂರಿಸಿಕೊಂಡು ಜಾತ್ರೆ ಪೇಟೆ ತಿರುಗಿಸಿದ ಕ್ಷಣವು ಜ್ಞಾಪಕ ಚಿತ್ರಶಾಲೆಯ ಕೆಲವು ಪುಟಗಳನ್ನು ಶ್ರೀಮಂತವನ್ನಾಗಿಸಿವೆ.

ಇವೆಲ್ಲಕ್ಕಿಂತ ಹೆಚ್ಚಾಗಿ ಆ ಎರಡು ತಿಂಗಳು ಅಜ್ಜಿ ರಾತ್ರಿ ಹೊತ್ತು ಹೇಳುತ್ತಿದ್ದ ಕುತೂಹಲಭರಿತ ಕಥೆಗಳು ನಮ್ಮನ್ನು ಅದ್ಭುತ ಮಾಯಾಲೋಕಕ್ಕೆ ಕರೆದುಕೊಂಡು ಸಾಗುತ್ತಿದ್ದವು. ಕಥೆಯಲ್ಲೊಂದು ಸಣ್ಣನೆಯ ನೀತಿ, ಹಾಸ್ಯ ತುಂಬಿರುತ್ತಿತ್ತು. ಇವೆಲ್ಲವೂ ಇಂದಿನ ಕೋಡಿಂಗ್, ಎಐ ಕಲಿಸಿಕೊಡುವ ಪಾಠಕ್ಕಿಂತ ಸಾವಿರ ಪಟ್ಟು ಚೆನ್ನಾಗಿರುತ್ತಿದ್ದವು.

ಇಂತಹ ಸುಂದರ ಅಜ್ಜಿಮನೆಗೆ ಯಾರ ಕಣ್ಣು ತಾಕಿತೋ ಕಾಣೆ. ನೋಡ ನೋಡುತ್ತಲೇ ಕುಟುಂಬಗಳು ಕಿರಿದಾಗುತ್ತಾ ಸಾಗಿದವು. ಮನುಷ್ಯ ತಾನೇ ರಚಿಸಿಕೊಂಡ ಬಲೆಯಲ್ಲಿ ಸಿಲುಕಿ ಹಾಕಿಕೊಂಡು ವಿಲವಿಲ ಒದ್ದಾಡುತ್ತಾ ತಾನು ಅನುಭವಿಸಿದ ಬಾಲ್ಯದ ಸುಂದರ ಕ್ಷಣಗಳನ್ನು ತನ್ನ ಮಕ್ಕಳಿಗೆ ನೀಡಲಾಗದೇ ಅಯ್ಯೋ ನಾವು ತಪ್ಪು ಮಾಡಿಬಿಟ್ಟೆವಲ್ಲ ಎಂಬ ಪಶ್ಚಾತ್ತಾಪದಿಂದ ಒಲ್ಲದ ಮನಸ್ಸಿನಿಂದ, ಮಕ್ಕಳ ಕಾಟವನ್ನು ತಪ್ಪಿಸಿಕೊಳ್ಳಲು ಬೇಸಿಗೆ ಶಿಬಿರದ ಹೆಸರಿನಲ್ಲಿ ಇಂದು ತಲೆ ಎತ್ತಿರುವ ಶಾಲೆಗಳಿಗೆ ಕಳುಹಿಸುತ್ತಿದ್ದಾನೆ.

ಇಂದು ಪ್ರತಿಯೊಂದು ಖಾಸಗಿ ಶಾಲೆಗಳು ಮುಂದಿನ ಶೈಕ್ಷಣಿಕ ವರ್ಷದ ಶಾಲಾ ದಾಖಲಾತಿಗಳನ್ನು ಹೆಚ್ಚಿಸಿಕೊಳ್ಳಲು ಹಾಗೂ ಪ್ರಸ್ತುತ ಇರುವ ದಾಖಲಾತಿಯನ್ನು ಉಳಿಸಿಕೊಳ್ಳಲು ಶಾಲೆಯಲ್ಲೇ ಬೇಸಿಗೆ ಶಿಬಿರ ನಡೆಸುತ್ತಿವೆ. ಈ ಸುಡು ಬೇಸಿಗೆಯಲ್ಲಿ ನೀರಸವಾದ ಆಟಗಳೊಂದಿಗೆ, ಪಾಠವನ್ನು ಮಾಡುತ್ತಿದ್ದಾರೆ. ಹಾಗಾಗಿ ಇಂದಿನ ಮಕ್ಕಳಿಗೆ ಬೇಸಿಗೆ ರಜೆ ಎಂದರೆ ಅದೊಂದು ತರಹದ ಜೈಲಿದ್ದ ಹಾಗೆಯೇ. ಮಕ್ಕಳಲ್ಲೂ ರಜೆ ಎಂಬ ಯಾವ ಉತ್ಸಾಹ, ಸಂತೋಷವೂ ಉಳಿದಿಲ್ಲ ಎನಿಸುತ್ತಿದೆ. ಎರಡು ತಿಂಗಳ ರಜೆಯಲ್ಲಿ ಐದಾರು ದಿನ ಪ್ರವಾಸಕ್ಕೆ ಹೋಗಿ ಬರುವುದೇ ರಜೆಯ ಮಜಾ ಆಗಿದೆಯೇ ವಿನಃ ಅಜ್ಜಿ ಮನೆಯತ್ತ ಮುಖ ಮಾಡುವುದಿಲ್ಲ.

ಪಾಲಕರಿಗೂ ಇಂದಿನ ಮಕ್ಕಳಿಗೂ ಅಜ್ಜಿಮನೆ ಎಂದರೆ ಒಂದು ಅಸಡ್ಡೆಯ ಭಾವ. ಅಷ್ಟೇ ಅಲ್ಲ, ಅಜ್ಜಿಮನೆಯ ಚಿತ್ರಣವೂ ಈಗ ಬದಲಾಗಿದೆಯಲ್ಲ! ಅಪ್ಪಿ ತಪ್ಪಿ ಅಜ್ಜಿಮನೆಗೆ ಹೋದರೂ ಅಲ್ಲೂ ಟಿ.ವಿ, ಮೊಬೈಲ್ ಹಾವಳಿ ಬೆಂಬಿಡದೇ ಇರುವುದಿಲ್ಲ. ಅಜ್ಜ ಅಜ್ಜಿಯು ತಿನಿಸುವ ಕೈ ತುತ್ತಿನ ಸವಿ ಇಂದಿನ ಮಕ್ಕಳಿಗೆ ಬೇಕಿಲ್ಲ. ಎಳವೆಯಲ್ಲಿ ಮಕ್ಕಳಿಗೆ ಏನು ನೀಡಬೇಕು, ಯಾವುದನ್ನು ನೀಡಬಾರದು ಎಂಬುದನ್ನು ಅರ್ಥ ಮಾಡಿಕೊಳ್ಳುವಲ್ಲಿ ಎಡವುತ್ತಿರುವ ಪಾಲಕರದ್ದೂ ಇದರಲ್ಲಿ ಸಮಪಾಲು. ಆದ್ದರಿಂದಲೇ ಇಂದಿನ ಮಕ್ಕಳ ಬಾಲ್ಯದ ನೆನಪಿನ ಪುಸ್ತಕದಲ್ಲಿ ಅಜ್ಜಿ ಮನೆಯೆಂಬ ಬೇಸಿಗೆ ರಜೆಯ ನೆನಪಿನ ಪುಟ ಖಾಲಿ ಉಳಿದಿದೆ.

ಪ್ರತಿಕ್ರಿಯಿಸಿ: **feedback@sudha.co.in**